Rotary
# JASMINE
ಜಾಸ್ಮಿನ್
जास्मिन
WEEKLY BULLETIN OF ROTARY CLUB KUNDAPURA SOUTH


Charter No. 23496 | Zone 1, R. I. Dist. 3182 | Charter Date : 04-03-1986



THE MAGIC OF ROTARY



**Rtn. Dr. Stephanie Urchick**
R. I. President



**Rtn. MPHF CA Dev Anand**
Dist. Governor



**Rtn. Judith Mendonca**
President



**Rtn. Dr. Rajendra Shetty**
Asst. Governor



**Rtn. Bharath Shetty**
Secretary



**Rtn. Mahendr Shetty**
Zonal Lieutenant



**Rtn. Dr. Anulekha Bayari**
Bulletin Editor

Volume 39 | Issue - 41 | 03rd April 2025

## JOINT MEETING WITH ROTARY CLUB KUNDAPUR RIVESIDE

ವಿಷಯ :

### ಪ್ರಕೃತಿ ಸಂರಕ್ಷಣೆಯಲ್ಲಿ ನಮ್ಮ ಪಾತ್ರ

Guest :
Rtn Dr . Rajaram Shetty
Past President , Rotary Club Kundapur

Time : 7.00 p.m.
Venue : Hotel Shivaprasad Grand, Kundapura

**39th year of Service and Fellowship**




ತಾ. 27–03–2025ರ ಗುರುವಾರ ಮಾರ್ಚ್ ತಿಂಗಳ ಕುಟುಂಬ ಸಮ್ಮಿಲನ ಕಾರ್ಯಕ್ರಮವಾಗಿದ್ದು, ಕುಂದಾಪುರದ ಕೋಣಿ ರಸ್ತೆಯಲ್ಲಿರುವ ಫಿಲೋಮಿನಾ ಕಮರ್ಶಿಯಲ್ ಪಾರ್ಕ್‌ನಲ್ಲಿ ನಡೆಯಿತು. ಇನ್ನರ್‌ವ್ಹೀಲ್ ಅಧ್ಯಕ್ಷೆ ರೊ. ಸುರೇಖಾ ಪುರಾಣಿಕ್ ಹಾಗೂ ಆ್ಯನ್ ಶಾಂತ ಕಾಂಚನ್‌ರವರ ಪ್ರಾರ್ಥನೆಯ ಮುಖೇನ ಸಭಾ ಕಾರ್ಯಕ್ರಮ ಆರಂಭಗೊಂಡಿತು. ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾ ರೋಟರಿ ಕುಟುಂಬವನ್ನು ಆತ್ಮೀಯವಾಗಿ ಸ್ವಾಗತಿಸಿದರು. ರೊ. ಕೆ. ಕೆ. ಕಾಂಚನರು ಕಳೆದ ವಾರದ ವರದಿಯನ್ನು ಸಭೆಗೆ ಮಂಡಿಸಿದರು.

ರೊ. ದೋಮ ಚಂದ್ರಶೇಖರ್‌ರವರು ವಾರದ ಚಿಂತನೆಯಲ್ಲಿ ಬೀchiಯವರ ಸಾಲುಗಳನ್ನು ವಿವರಿಸಿ, ನಾವೆಲ್ಲ ಎಂದೆಂದೂ ಪ್ರತಿನಿತ್ಯವೂ ನಗುತ್ತಾ ಖುಷಿಯಾಗಿ ಇರಬೇಕೆಂದರು. ರೊ. ಕೆ. ಕೆ. ಕಾಂಚನರು ರೋಟರಿ ಮಾಹಿತಿಯಲ್ಲಿ ರೋಟರಿಯು ಒಡನಾಟಕ್ಕೆ ಹುಟ್ಟಿಕೊಂಡ ಸಂಸ್ಥೆ ಎನ್ನುತ್ತಾ 3H Program ಅಂದರೆ Health, Hunger, Humanityಯ ಬಗ್ಗೆ ತಿಳಿಸಿದರು. ಹಾಗೂ ಅದು 1978ರಲ್ಲಿ ಆರಂಭಗೊಂಡಿತು ಎಂದರು.

ನಂತರ ಕುಟುಂಬ ಸಮ್ಮಿಲನ ಕಾರ್ಯಕ್ರಮದ ಪ್ರಾಯೋಜಕತ್ವವನ್ನು ವಹಿಸಿಕೊಂಡಿದ್ದ ನಮ್ಮ ಕ್ಲಬ್ಬಿನ 5 ಸದಸ್ಯರಾದ ರೊ. ಸಟ್ವಾಡಿ ವಿಜಯ ಶೆಟ್ಟಿ, ರೊ. ರಾಮಪ್ರಸಾದ್ ಶೇಟ್, ರೊ. ರಾಘವೇಂದ್ರ ಭಟ್, ರೊ. ವಿನಾಯಕ ಪೈ ಹಾಗೂ ರಒ. ಸುಹಾಸ್ ಭಂಡಾರ್‌ಕರ್ ಇವರನ್ನು ಸಭೆಯಲ್ಲಿ ಗುರುತಿಸಿ ಗೌರವಿಸಿದರು. ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ತಮ್ಮ ಅಧ್ಯಕ್ಷೀಯ ನುಡಿಯಲ್ಲಿ ತಾ. 22–03–2025ರಂದು ನಡೆದ ಉಚಿತ ಕಿವಿಯ ತಪಾಸಣೆ ಹಾಗೂ ಶ್ರವಣ ಸಾಧನಾ ವಿತರಣೆ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು ಹಾಗೂ ಪ್ರಾಯೋಜಕತ್ವ ವಹಿಸಿ ಸಹಕರಿಸಿದ ಉದ್ಯಮಿ ರೊ. ಅರುಣ್ ಮೆಂಡೋನ್ಸಾರವರ ಸಹೋದರ ಪ್ರತಾಪ್ ಮೆಂಡೋನ್ಸಾರವರಿಗೆ ಸಭೆಯಲ್ಲಿ ಧನ್ಯವಾದವನ್ನಿತ್ತರು. ಆ್ಯನ್ ಶೈಲಾ ಕ್ರಾಸ್ಟೋರವರು ಲಕ್ಕಿ ರೊಟೇರಿಯನ್ ಆಗಿ ಮೂಡಿಬಂದರು.

ಚುಟುಕಾದ ಸಭಾ ಕಾರ್ಯಕ್ರಮದ ನಂತರ ವೇದಿಕೆಯ ಸಾಂಸ್ಕೃತಿಯ ಕಾರ್ಯಕ್ರಮಕ್ಕೆ ಸಜ್ಜುಗೊಂಡಿತು. ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ ಹಾಗೂ ರೊ. ಜೆರಾಲ್ಡ್ ಕ್ರಾಸ್ತಾರವರು ನಗೆ ಚಟಾಕಿಯು ನೆರೆದ ಎಲ್ಲರನ್ನೂ ನಗೆಗಡಲಿನಲ್ಲಿ ತೇಲಿಸಿತು. ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಅಭಿನಯ ಗೀತೆಯಲ್ಲಿ ಪ್ರಥಮ ಸ್ಥಾನಗಳಿಸಿದ ಆ್ಯನೆಟ್ ಆರಾಧ್ಯ ಬಾಯರಿಯು ಅಭಿನಯ ಗೀತೆಯನ್ನು ಅಭಿನಯಿಸಿ, ಎಲ್ಲರ ಪ್ರಶಂಸೆಗೆ ಪಾತ್ರಳಾದಳು. ಹೆಸರಾಂತ ಹಾಡುಗಾರ ಅಶೋಕ್ ಸಾರಂಗ್‌ರವರು ತಮ್ಮ ಸಂಗೀತದಿಂದ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮುಂದುವರೆಸಿದರು. ನಂತರ ಇನ್ನರ್‌ವ್ಹೀಲ್ ಕಾರ್ಯದರ್ಶಿ ಆ್ಯನ್ ಸುಮಾ ಪುತ್ರನ್, ಆ್ಯನ್ ರಶ್ಮಿ ಶೇಟ್, ರೊ. ವಿವಿಯನ್ ಕ್ರಾಸ್ಟೋರವರು ತಮ್ಮ ಕಂಠಸಿರಿಯಿಂದ ರಂಜಿಸಿದರು. ಆ್ಯನ್ ಆ್ಯನೆಟ್‌ರವರ ನೃತ್ಯ ಎಲ್ಲರಿಗೂ ಮುದವನ್ನು ನೀಡಿತು. ಕುಟುಂಬ ಸಮ್ಮಿಲನದ ಆತಿಥ್ಯವನ್ನು ವಹಿಸಿಕೊಂಡಿದ್ದ ನಮ್ಮ ಕ್ಲಬ್ಬಿನ ಸದಸ್ಯರು ತಾವೇ ಸ್ವತಃ ಊಟೋಪಚಾರದಲ್ಲಿ ಉಪಚರಿಸುತ್ತಾ ಬಡಿಸಿರುವುದು ನಿಜಕ್ಕೂ ಅಭಿನಂದನಾರ್ಹ. ಸಹಭೋಜನದೊಂದಿಗೆ ಕುಟುಂಬ ಸಮ್ಮಿಲನ ಕಾರ್ಯಕ್ರಮವು ಮುದದಿಂದ ನೆರವೇರಿತು.




ನಮ್ಮ ರೋಟರಿ ಕ್ಲಬ್ ಕುಂದಾಪುರ ದಕ್ಷಿಣ ಸ್ಥಾಪನೆಯಾಗಿದ್ದು, 04–03–1986ರಂದು. ಮಾರ್ಚ್ ತಿಂಗಳು ನಮ್ಮ ಕ್ಲಬ್ಬಿಗೆ Charter Month. ರೊ. ಡಾ. ಎಸ್. ಎನ್. ಪಡಿಯಾರ್‌ರವರು ನಮ್ಮ ಕ್ಲಬ್ಬಿನ ಸ್ಥಾಪಕಾಧ್ಯಕ್ಷರಾಗಿದ್ದು, ಪ್ರಥಮ ಒಂದೂವರೆ ವರ್ಷಗಳ ಕಾಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಕಳೆದ ವಾರ ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರು ನನ್ನ ಹತ್ತಿರ " ಈ ತಿಂಗಳಿನಲ್ಲಿ ನಾವು ನಮ್ಮ ಸ್ಥಾಪಕಾಧ್ಯಕ್ಷರಾಗಿದ್ದ ಡಾ. ಎಸ್. ಎನ್. ಪಡಿಯಾರ್‌ರವರನ್ನು ಕ್ಲಬ್ಬಿನ ವತಿಯಿಂದ ಭೇಟಿಯಾಗಿ ಮಾತನಾಡಿಸೋಣವೇ" ಎಂದರು. ತಕ್ಷಣ ನನಗೆ ಅರೇ ಇಷ್ಟು ದಿನ ಈ ಕೆಲಸ ನಮಗ್ಯಾರಿಗೂ ಯಾಕೆ ಹೊಳೆಯಲಿಲ್ಲ ಎಂದೆನಿಸಿತು. ತಕ್ಷಣ ರೊ. ಕೆ. ಕೆ. ಕಾಂಚನ್‌ರವರ ಮುಖಾಂತರ ರೊ. ಡಾ. ಪಡಿಯಾರ್‌ರವರ ಮನೆಗೆ ಫೋನಾಯಿಸಿದೆವು. ಫೋನ್ ಸ್ವೀಕರಿಸಿದ ಪತ್ನಿ ಶ್ರೀಮತಿ ಅರುಣಾ ಪಡಿಯಾರ್‌ರವರು ಆತ್ಮೀಯವಾಗಿ ಮಾತನಾಡಿಸಿ, ಡಾ. ಪಡಿಯಾರ್‌ರವರಿಗೆ ಈಗ ವಯೋ ಸಹಜವಾಗಿ ನೆನಪಿನ ಶಕ್ತಿ ಕುಂದಿದ್ದು, ಬರೇ 5–6 ಜನ ಬಂದರೆ ಸಾಕು ಎಂದಾಗ ನಿಜವಾಗಿ ಪಿಚ್ಚೆನಿಸಿತು. ಸ್ಥಾಪಕ ಸದಸ್ಯರೊಂದಿಗೆ ಒಂದಿಷ್ಟು ಅವರ ಕಾಲದ ಹಿರಿಯರು ಹಾಗೂ ಹಿತೈಷಿಗಳು ಭಾಗವಹಿಸಬೇಕೆಂಬ ಬಯಕೆಗೆ ಕಡಿವಾಣ ಹಾಕಬೇಕಾಯಿತು. ಕೊನೆಗೆ 6 ಜನ ಸದಸ್ಯರು ಭಾಗಿಯಾದೆವು. ಯುಗಾದಿಯ ದಿನದಂದು ಸೌಹಾರ್ದದ ಭೇಟಿಯಾದುದರಿಂದ ಶ್ರೀಮತಿ ಅರುಣಾ ಪಡಿಯಾರ್‌ರವರು ಬೇವು ಮತ್ತು ಬೆಲ್ಲವನ್ನು ಕೊಟ್ಟು ನಮ್ಮನ್ನು ಸ್ವಾಗತಿಸಿದರು. 83ರ ಹರೆಯದಲ್ಲೂ ದೈಹಿಕವಾಗಿ ಆರೋಗ್ಯವಾಗಿರುವ ಡಾ. ಪಡಿಯಾರ್‌ರವರಿಗೆ ನಮ್ಮೆಲ್ಲ ಎಲ್ಲರನ್ನೂ ಗುರುತಿಸಲು ಸಾಧ್ಯವಾಗಲಿಲ್ಲ. ಅವರು ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಒಂದು ಅವಧಿಗೆ ಅವರಿಗೆ ಕಾರ್ಯದರ್ಶಿಯಾಗಿದ್ದ ರೊ. ಅರುಣ್ ಕುಮಾರ್ ಶೆಟ್ಟಿಯವರು ಹಾಗೂ ರೊ. ಸಂತೋಷ್ ಕುಮಾರ್ ಶೆಟ್ಟಿಯವರು ಮತ್ತು ಅಧ್ಯಕ್ಷೆ ರೊ. ಜುಡಿತ್ ಮೆಂಡೋನ್ಸಾರವರು ಡಾ. ಪಡಿಯಾರ್ ದಂಪತಿಯನ್ನು ಶಾಲು ಹೊದಿಸಿ, ಹಣ್ಣು ಮತ್ತು ಸ್ಮರಣಿಕೆಯನ್ನು ನೀಡಿ ಗೌರವಿಸಿದೆವು. ನೀವು ಸ್ಥಾಪಿಸಿದ ನಮ್ಮ ಕ್ಲಬ್ ಇಂದು ರೋಟರಿ ಜಿಲ್ಲೆಯಲ್ಲೇ ಒಂದು ಒಳ್ಳೆಯ ಕ್ಲಬ್ ಆಗಿ ಗುರುತಿಸಿಕೊಂಡಿದೆ ಎಂದು ರೊ. ಅರುಣ್ ಕುಮಾರ್ ಶೆಟ್ಟಿಯವರು ಹೇಳಿದಾಗ "ಅದಕ್ಕೆ ನಿಮ್ಮನ್ನು ಸೇರಿಸಿದೊಂಡಿದ್ದು" ಎಂದು ಡಾ. ಪಡಿಯಾರ್‌ರವರು ಮುಗುಳ್ನಕ್ಕರು. ಇಂದು ನಮ್ಮ ಕ್ಲಬ್ಬಿನ ಅಧ್ಯಕ್ಷತೆ ಪ್ರಥಮ ಬಾರಿಗೆ ಮಹಿಳೆಯ ಕೈಯಲ್ಲಿದೆ ಎಂದು ರೊ. ಸಂತೋಷ್ ಕುಮಾರ್ ಶೆಟ್ಟಿಯವರು ಹೇಳಿದಾಗ ಅದು ಬಹಳ ಸೇಫ್ ಆಗಿರುತ್ತದೆ ಎಂದು ಅಭಿಮಾನ ಪಟ್ಟರು . ಸಮಯ ಕಳೆದಂತೆ ರೊ. ಕಾಂಚನ್ ಮತ್ತು ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿಯವರೊಂದಿಗೆ ಯೋಗ ಕ್ಲಾಸ್‌ನ ಅನುಭವ ಹಾಗೂ ನನ್ನ ತಂದೆಯವರೊಂದಿಗಿನ ರಾಜಕೀಯದ ಒಡನಾಟವನ್ನು ಸ್ಮರಿಸಿಕೊಂಡರು. ನಮಗೆಲ್ಲಾ ಒಳ್ಳೆಯ ಆತಿಥ್ಯವನ್ನು ನೀಡಿದ ಡಾ. ಪಡಿಯಾರ್‌ರವರ ಕುಟುಂಬದೊಂದಿಗೆ ಒಂದು ಘಂಟೆಯ ಕಾಲ ಕಳೆದಿದ್ದು, ಒಂದು ಆತ್ಮೀಯ ಅನುಭೂತಿಯನ್ನು ಸೃಷ್ಟಿಸಿತು.

**– ರೊ. ವಿವಿಯನ್ ಕ್ರಾಸ್ಟೋ**



